ಶ್ರೀ ಹೆಚ್. ಎಲ್. ತಿಮ್ಮೇಗೌಡ (ಆರೋಗ್ಯ ಸಚಿವರು).—

ಅ) ೮

ಆ) ೧ ಕಿರಿಯ ಆರೋಗ್ಯ ಸಹಾಯಕ (ಪುರುಷ) ೧
೨ ಫಾರ್ಮಾಸಿಸ್ಟ್ ೧

೨

ಇ) ಆದಷ್ಟು ಬೇಗನೆ ತುಂಬಲು ಕ್ರಮ ಕೈಗೊಳ್ಳಲಾಗುವುದು.

ರಾಜ್ಯದಲ್ಲಿ ವರದಕ್ಷಣೆಯಿಂದ ಸಾವುಗಿಡಾಗಿರುವ ಬಗ್ಗೆ

೧೮೪ ಶ್ರೀ ಕೆ. ಹೆಚ್. ಪಾಟೀಲ್ (ಗದಗ).—ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ವರದಕ್ಷಿಣೆಯ ಪ್ರಯುಕ್ತ ಸಾವುಗಳು ಹೆಚ್ಚುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ, ಅಂತಹ ಅಪರಾಧಿಗಳ ಮೇಲೆ ದಂಡನಾ ಕ್ರಮ ಕೈಗೊಳ್ಳದ ಅಧಿಕಾರಿಗಳ ಮೇಲೆ ಯಾವ ಕ್ರಮ ಕೈಗೊಳ್ಳಲಾಗಿದೆ ?

ಶ್ರೀ ಬಿ. ರಾಚಯ್ಯ (ಗೃಹ ಸಚಿವರು): —

ಅ) ಇಲ್ಲ. ಆದರೆ ೧೯೮೪ರ ಅಂಕಿಗಳಿಗೆ ಹೋಲಿಸಿದರೆ ೧೯೮೫ರಲ್ಲಿ ಕಡಿಮೆಯಾಗಿದೆ.

ಆ) ಕಡಿಮೆಯಾಗಿದ್ದರೂ ಅಪರಾಧಿಗಳ ಮೇಲೆ ಕ್ರಮ ಕೈಗೊಳ್ಳದ ಅಧಿಕಾರಿಗಳನ್ನು ಇಲಾಖಾ ತನಿಖೆಗೆ ಒಳಪಡಿಸಿ ಶಿಸ್ತಿನ ಕ್ರಮ ತೆಗೆದು ಕೊಳ್ಳಲಾಗುತ್ತಿದೆ.

ರಾಜ್ಯದಲ್ಲಿನ ಮೀನು ಉತ್ಪಾದನೆ ಬಗ್ಗೆ

೩೭೯ ಶ್ರೀ ಆರ್. ವೆಂಕಟರಾಮಯ್ಯ (ಮುಳಬಾಗಿಲು).—ಮಾನ್ಯ ಮೀನುಗಾರಿಕೆ ಹಾಗೂ ಬಂದರು ಸಚಿವರು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ಒಟ್ಟು ಮೀನು ಉತ್ಪಾದನೆ ಎಷ್ಟು ?

ಆ) ಸಮುದ್ರದಲ್ಲಿ ಸಿಕ್ಕುವ ಮೀನೆಷ್ಟು ?

ಇ) ನದಿಗಳಲ್ಲಿ ಸಿಕ್ಕುವ ಮೀನೆಷ್ಟು ?

ಈ) ಕೆರೆಗಳಲ್ಲಿ ಸಿಕ್ಕುವ ಮೀನೆಷ್ಟು ?

ಉ) ಕೆರೆಗಳಲ್ಲಿ ಸಿಕ್ಕುವ ಮೀನಿನ ಅಭಿವೃದ್ಧಿಗೆ ಕೈಗೊಂಡ ನಿರ್ದಿಷ್ಟ ಯೋಜನೆಗಳಾವುವು ?

ಊ) ಅಂತಹ ಯೋಜನೆಗೆ ಆಗಿರುವ ಖರ್ಚೆಷ್ಟು ?

ಋ) ಬಯಲು ಪ್ರದೇಶಗಳಿಗೆ ಬಂದರು ಪ್ರದೇಶಗಳಿಂದ ಮೀನು ಸರಬರಾಜು ಮಾಡಲು ಸರ್ಕಾರದವರು ಯಾವುದಾದರೊಂದು ಕಾರ್ಯಕ್ರಮವನ್ನು ಕೈಗೊಂಡಿದ್ದಾರೆಯೇ ?

ಋೂ) ಇಲ್ಲದಿದ್ದಲ್ಲಿ ತುರ್ತು ಆಧ್ಯತೆ ಮೇರೆಗೆ ಮೀನು ಸರಬರಾಜು ಮಾಡಲು ಕ್ರಮ ಕೈಗೊಳ್ಳುವರೆ ?

ಶ್ರೀ ಸಿ. ಬೈರೆಗೌಡ (ಮೀನುಗಾರಿಕೆ ಮತ್ತು ಬಂದರು ಸಚಿವರು) –

	೮೪-೮೫	೮೫-೮೬ (ಡಿಸೆಂಬರ್ ೮೫ ರವರೆಗೆ)
ಅ)	೨೦೭೬೮೦ ಮೆಟ್ರಿಕ್ ಟನ್	೧೭೫೧೧೨ ಮೆಟ್ರಿಕ್ ಟನ್
ಆ)	೧೬೮೦೪೬ ,,	೧೪೯೩೧೨ ,,
ಇ)	೫೦೦ ,,	೨೦೦ ,,
ಈ)	೩೯೦೦೦ ,,	೨೪೫೦೦ ,,
ಉ)	೧) ಮೀನಿನ ಮರಿ ಉತ್ಪಾದನೆ, ಸಾಕಾಣಿಕೆ ಮತ್ತು ವಿತರಣೆ,	
	೨) ಮೀನುಗಾರಿಕೆ ಅಭಿವೃದ್ಧಿ ಸಂಸ್ಥೆಗಳು,	೨
	೩) ಕೊಳಗಳಲ್ಲಿ ಮೀನು ಅಭಿವೃದ್ಧಿ,	
ಊ)	೧) ೨೭.೭೨ ಲಕ್ಷ	೧೦.೦೯ ಲಕ್ಷ
	೨) ೨೨.೮೨ ಲಕ್ಷ	೧೬.೮೦ ಲಕ್ಷ
	೩) ೩.೦೩ ಲಕ್ಷ	೨.೬೬ ಲಕ್ಷ

ಋ) ಕರ್ನಾಟಕ ಮೀನುಗಾರಿಕೆ ಅಭಿವೃದ್ಧಿ ನಿಗಮವು ತನ್ನದೇ ಆದ ''ಕೋಲ್ಡ್ ಚೈನ್ ನೆಟ್ ವರ್ಕ್'' ಯೋಜನೆಯಲ್ಲಿ ರಾಜ್ಯದಲ್ಲಿ ಮೀನು ಮಾರಾಟ ಮಾಡುತ್ತಿದೆ. ಅಲ್ಲದೆ ೧೯೮೫-೮೬ ರಲ್ಲಿ ಪ್ರಾಯೋಗಿಕವಾಗಿ ಬೆಂಗಳೂರು ಮತ್ತು ಮಂಡಿಕೇರಿಗಳಲ್ಲಿ ತಾಜಾ ಮೀನು ಮಾರಾಟ ಕ್ರಮವನ್ನು ಕೈಗೊಂಡಿದೆ.

ಋಋ) ಉದ್ಭವಿಸುವುದಿಲ್ಲ.

ರಾಜ್ಯದಲ್ಲಿ ಕುಟುಂಬ ಯೋಜನೆ ಬಗ್ಗೆ

೯೭೧ ಶ್ರೀ ಕೆ. ವಸಂತ ಬಂಗೇರ.—ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸಿಂವರೆ ?

ಅ) ರಾಜ್ಯದಲ್ಲಿ ಕುಟುಂಬ ಯೋಜನೆಯಂತೆ ಶಸ್ತ್ರ ಚಿಕಿತ್ಸೆ ಮಾಡಿಸಿಕೊಂಡ ನಂತರ ಅವರಿಗಾದ ತೊಂದರೆಯ ಬಗ್ಗೆ ವೈದ್ಯರ ನಿರ್ಲಕ್ಷ್ಯವೇ ಕಾರಣ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಕುಟುಂಬ ಯೋಜನೆಯಂತೆ ಶಸ್ತ್ರ ಚಿಕಿತ್ಸೆ ಮಾಡಿಸಿಕೊಂಡ ಅನೇಕ ಬಡವರು ನಿಶ್ಶಕ್ತಿಯಿಂದ ಅಥವಾ ಇನ್ನಿತರ ತೊಂದರೆಗಳಿಂದ ಯಾವುದೇ ಕೆಲಸವನ್ನು ಮಾಡಲಾಗದೇ ಬಳಲುವವರಿಗೆ ಸರ್ಕಾರದಿಂದ ಪರಿಹಾರ ಕೊಡಲಾಗುವುದೇ ?

ಶ್ರೀ ಹೆಚ್.ಎಲ್. ತಿಮ್ಮೇಗೌಡ (ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು).—

ಅ) ಈ ರೀತಿ ಕೆಲವು ಅಪಾದನೆಗಳನ್ನು ಸರ್ಕಾರಕ್ಕೆ ಮಾಡಲಾಗಿದೆ.

ಆ) ಹೌದು.

ಡೀಸಲ್ ಸಬ್ಸಿಡಿ ಬಗ್ಗೆ

೨೫೧ ಶ್ರೀ ಬಿ. ಎ. ಉಮರಬ್ಬ (ವಿಟ್ಲ) ಮಾನ್ಯ ಮೀನುಗಾರಿಕೆ ಮತ್ತು ಬಂದರು ಸಚಿವರು ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ೧೯೮೪-೮೫ ಹಾಗೂ ೧೯೮೫-೮೬ ನೇ ಸಾಲಿಗಳಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಮೀನುಗಾರಿಕಾ ಯಾಂತ್ರಿಕ ದೋಣಿಗಳಿಗೆ ನೀಡಲಾದ ಡೀಸಲ್ ಸಬ್ಸಿಡಿ ಎಷ್ಟು ?